ಪೈಸೆಗಳನ್ನು ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ 18-11-85ರಲ್ಲಿ ಸಲ್ಲಿಸಿದ್ದರು. ಸದರಿ ಬಿಲ್ಲಿನ ಬಾಬ್ತು ರಶೀದಿಗಳಿಗೆ ಅಧಿಕೃತ ಸರ್ಕಾರಿ ವೈದ್ಯರಿಂದ ದೃಢೀಕರಿಸಿಕೊಂಡು ಬಿಲ್ಲನ್ನು ಸಲ್ಲಿಸುವಂತೆ ಕೋರಲು ಸದರಿ ಶಿಕ್ಷಕಿಯವರು ತಟಸ್ಥರಾಗಿದ್ದುದರಿಂದ ಬಿಲ್ಲುಗಳು ಮಂಜೂರಾತಿಯಾಗಿರುವುದಿಲ್ಲ. ಸದರಿ ಶಿಕ್ಷಕಿಯವರು ಒದಗಿಸಬೇಕಾದಂಥ ದಾಖಲೆಗಳನ್ನು ಒದಗಿಸಿದ ತಕ್ಷಣ ಸದರಿ ಬಿಲ್ಲುಗಳನ್ನು ಮಂಜೂರು ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸದರಿ ಶಿಕ್ಷಕಿಯವರಿಗೆ 7-2-85 ರಿಂದ 9-4-85ರ ತನಕ ವೈದ್ಯಕೀಯ ಪತ್ರದ ಆಧಾರದ ಮೇಲೆ ರಜೆಯನ್ನು ಮಂಜೂರು ಮಾಡಲಾಗಿದೆ.

(9) **ಬೆಂಗಳೂರಿನ ನಾಗೇಂದ್ರ ಬ್ಲಾಕ್, ಗೇರಹಳ್ಳಿ ಮತ್ತಿತರ ಬಡಾವಣೆಗಳನ್ನು ಬಸವನಗುಡಿ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿಸುವುದು.**

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ: ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಬನಶಂಕರಿ ಒಂದನೆಯ ಹಂತ ಹಾಗೂ ಮೂರನೇ ಹಂತಗಳಿಗೆ ಹೊಂದಿಕೊಂಡಿರುವಂತಹ, ಅದೇ ರೀತಿಯಲ್ಲಿ ಬಸವನಗುಡಿ ವಿಧಾನಸಭಾ ಕ್ಷೇತ್ರ ಹಾಗೂ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಿರುವಂತಹ ನಾಗೇಂದ್ರ ಬ್ಲಾಕ್ ಮತ್ತು ಗೇರಹಳ್ಳಿ ಬಡಾವಣೆ ಹಾಗೂ ಶ್ರೀನಿವಾಸನಗರ ಬಡಾವಣೆಯ ಕೆಲವು ಭಾಗಗಳು, ಬೆಂಗಳೂರು ನಗರದ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಸೇರಿವೆ.

ಯಲಹಂಕ ವಿಧಾನಸಭಾ ಕ್ಷೇತ್ರಕ್ಕೂ ಈ ನಾಗೇಂದ್ರ ಬ್ಲಾಕ್, ಗೇರಹಳ್ಳಿ ಬಡಾವಣೆ, ಶ್ರೀನಿವಾಸನಗರದ ಕೆಲವು ಭಾಗಗಳಿಗೂ ಕೊಂಕಣ ಹಾಗೂ ಮೈಲಾರದ ಸಂಬಂಧ ಇದೆ. ಹೀಗಾಗಿ ಈ ಪಾಕೆಟ್ಸ್ ಏನಿವೆ ಇವು ಬಹಳ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು ಅಭಿವೃದ್ಧಿಯನ್ನು ಕಾಣುತ್ತಿಲ್ಲ. ಇದರಿಂದ ಈ ಭಾಗದ ಜನರಿಗೂ ತೊಂದರೆಯಾಗಿದೆ. ಅವರು ತಮ್ಮ ಶಾಸಕರನ್ನು ಕಾಣಬೇಕಾದರೆ ದೂರದ ಯಲಹಂಕಕ್ಕೆ ಹೋಗಬೇಗಾಗಿದೆ. ಅದಕಾರಣ ಮೇಲ್ಕಂಡ ಬಡಾವಣೆಗಳನ್ನು ಬಸವನಗುಡಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಿದರೆ ಈ ಭಾಗದ ಜನರಿಗೆ ಹಾಗೂ ಮತದಾರರಿಗೆ ಬಹಳ ಅನುಕೂಲವಾಗುತ್ತದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು, ಕ್ಷೇತ್ರದ ಪುನರ್‌ವಿಂಗಡಣೆ ಬಗ್ಗೆ ಚುನಾವಣಾ ಆಯೋಗಕ್ಕೆ ಶಿಫಾರಸ್ಸು ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಗೇರಹಳ್ಳಿ, ನಾಗೇಂದ್ರ ಬ್ಲಾಕ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ವ್ಯಾಪ್ತಿಗೆ ಸೇರಿದೆ.

1971ರ ಜನಗಣತಿ ಆಧಾರದಂತೆ ಭಾರತದ ಸೀಮಾ ವಿಂಗಡಣೆಯ ಆಯೋಗವು ಬೆಂಗಳೂರು ಮಹಾನಗರ ಸಭೆಯ ವ್ಯಾಪ್ತಿಗೆ ಬರುವ ಪ್ರದೇಶವನ್ನು 12 ವಿಧಾನಸಭಾ ಕ್ಷೇತ್ರಗಳನ್ನಾಗಿ ವಿಂಗಡಿಸಿದೆ. ಗೇರಹಳ್ಳಿಯು ಬೆಂಗಳೂರು ಮಹಾನಗರಸಭೆಯ ವ್ಯಾಪ್ತಿಗೆ ಬರುವುದಿಲ್ಲ. ಇದನ್ನು ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಿ ಸದರಿ ಆಯೋಗವು ನಿರ್ಧರಿಸುವಂತೆ ಚುನಾವಣಾ ಆಯೋಗವು ಆದೇಶ ಹೊರಡಿಸಿದೆ.

ಭಾರತ ಸಂವಿಧಾನದ ಅನುಚ್ಛೇದ 82ರಂತೆ 2,000ನೇ ಇಸವಿಯ ನಂತರ ನಡೆಯುವ ಮೊದಲನೆ ಜನಗಣತಿಯ ಅಂಕಿ-ಅಂಶಗಳು ಪ್ರಕಟಣೆಯಾದ ನಂತರ ಸಂಸತ್ ನಿರ್ಧರಿಸುವಂತೆ, ಸೀಮಾ ವಿಂಗಡಣೆ ಮಾಡಬೇಕಾಗಿದೆ. ಆ ಸಂದರ್ಭದಲ್ಲಿ ಗೇರಹಳ್ಳಿಯ ವ್ಯಾಪ್ತಿಯಲ್ಲಿ ಬರುವ ನಾಗೇಂದ್ರ ಬ್ಲಾಕ್‌ನ್ನು ಬಸವನಗುಡಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸುವ ಬಗ್ಗೆ ಸೀಮಾ ವಿಂಗಡಣೆಯ ಆಯೋಗಕ್ಕೆ ಮನವಿಯನ್ನು ಸಲ್ಲಿಸಬೇಕಾಗುತ್ತದೆ.